# ದೊಡ್ಡಬಳ್ಳಾಪುರದಲ್ಲಿ ಮಾದರಿ ಕೆಲಸ



ಎಂ.ಬಿ. ಗುರುದೇವ್

ದೊಡ್ಡಬಳ್ಳಾಪುರದ ಲಯನ್ಸ್ ಕ್ಲಬ್‌ನ ಅಧ್ಯಕ್ಷನಾಗಿದ್ದಾಗ ಅಂದಾಜು 14 ಸಾವಿರ ಮಂದಿಯಿಂದ ನೇತ್ರದಾನಕ್ಕೆ ಹೆಸರು ನೋಂದಾಯಿಸಿದ್ದೆ. ದುರದೃಷ್ಟ ಅಂದರೆ, ಹೆಸರು ನೋಂದಾಯಿಸಿಕೊಂಡವರ ಪೈಕಿ ಸತ್ತ ಒಬ್ಬರಿಂದಲೂ ಕಣ್ಣುಗಳನ್ನು ದಾನವಾಗಿ ಪಡೆಯಲು ನನ್ನಿಂದ ಸಾಧ್ಯವಾಗಲಿಲ್ಲ. ಅದಕ್ಕೆಲ್ಲ ಕಾರಣ ಮೃತರಿಂದ ಕಣ್ಣುಗಳನ್ನು ಸಂಗ್ರಹಿಸುವ ನುರಿತ ಸಿಬ್ಬಂದಿಯ ತಂಡ ಇರಲಿಲ್ಲ.

ನನ್ನ ಅಳಿಯ ಡಾ. ಹರೀಶ್ ಅವರು 'ಅಭಿಷೇಕ್ ನೇತ್ರಧಾಮ' ಎನ್ನುವ ಸಂಸ್ಥೆಯನ್ನು 2011ರಲ್ಲಿ ಶುರು ಮಾಡಿದರು. ಅವರ ನೇತೃತ್ವದಲ್ಲಿ ಕಣ್ಣು ಸಂಗ್ರಹಕ್ಕೆ ನನ್ನನ್ನೂ ಸೇರಿದಂತೆ ತಂಡವೊಂದು ಸಿದ್ಧವಾಯಿತು. ಆ ಸಂಸ್ಥೆಯ ವತಿಯಿಂದಲೇ ನೇತ್ರದಾನಕ್ಕೆ ಹೆಸರು ನೋಂದಾಯಿಸುವ ಪ್ರಕ್ರಿಯೆ ಹಾಗೂ ಮೃತರಿಂದ ಕಣ್ಣು ಸಂಗ್ರಹಿಸುವ ಕಾರ್ಯಕ್ಕೆ ಚಾಲನೆ ನೀಡಿದೆವು. ಅದಕ್ಕೆಂದೇ 8–10 ಸ್ವಯಂಸೇವಕರೂ ಕೈಜೋಡಿಸಿದ್ದಾರೆ.

ನೇತ್ರದಾನಕ್ಕೆ ಹೆಸರು ನೋಂದಾಯಿಸುವುದರ ಬಗ್ಗೆ ಹೆಚ್ಚು ಗಮನಹರಿಸಿಲ್ಲ. ನನ್ನ ಪ್ರಕಾರ ಅದರಿಂದ ಯಾವುದೇ ಪ್ರಯೋಜನವಿಲ್ಲ. ಹೆಸರು ನೋಂದಾಯಿಸಿಕೊಂಡವರು ಯಾವಾಗ, ಎಲ್ಲಿ ಸಾಯುತ್ತಾರೆ ಅನ್ನೋದು ಯಾರಿಗೂ ಗೊತ್ತಿರುವುದಿಲ್ಲ! ಗೊತ್ತಾದರೂ ಆ ಸಂದರ್ಭದಲ್ಲಿ ನೇತ್ರದಾನ ಮಾಡುವ ಮನಸ್ಥಿತಿಯಲ್ಲಿ ಮೃತರ ಸಂಬಂಧಿಕರು ಇರುವುದಿಲ್ಲ. ಹೀಗಾಗಿ, ಸತ್ತವರ ಮನೆಗೆ ಹೋಗಿ ಮನವಿ ಮಾಡುವುದೇ ಉತ್ತಮ.

ನೇತ್ರದಾನ ಅನ್ನೋದು ಕಾಗದದ ಮೇಲೆ ನೋಂದಣಿ ಆಗುವುದಕ್ಕಿಂತ ಜನರ ಮನದಲ್ಲಿ ನೋಂದಣಿ ಆಗಬೇಕು. ನೇತ್ರದಾನ ಸಂಸ್ಥೆಗಳು ವಿಫಲವಾಗಿರುವುದೂ ಹೆಸರು ನೋಂದಾಯಿಸಿಕೊಳ್ಳುವ ಪ್ರಕ್ರಿಯೆಯಲ್ಲಿ.

ನೇತ್ರದಾನ ಜಾಗೃತಿಗೆ ನಾವು ಮೂರು ರೀತಿಯ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ನಮ್ಮವೇ ಮೂರು ಶಾಲೆಗಳಿವೆ. 34 ವರ್ಷಗಳಿಂದ ನಾನು ಮೂರು ಶಾಲೆಗಳ ಕಾರ್ಯದರ್ಶಿಯಾಗಿ

## 'ಪತ್ರ ಇಲ್ಲದಿದ್ದರೆ ಮಗು ಇಲ್ಲದಂತೆ'



ನನ್ನ ತಂದೆ ಎಂ.ಎಸ್. ವೆಂಕಟಸುಬ್ಬಯ್ಯನವರು ಶಿಕ್ಷಕರಾಗಿದ್ದವರು. ಗ್ಲಾಕೋಮದಿಂದ ಬಳಲುತ್ತಿದ್ದ ಅವರು, ಕ್ರಮೇಣ ದೃಷ್ಟಿ ಕಳೆದುಕೊಂಡರು. ಕಳೆದ ವರ್ಷ ಮೃತಪಟ್ಟರು.

ಜೀವನದಲ್ಲಿ ಸ್ವಲ್ಪ ದಿನದಮಟ್ಟಿಗೆ ದೃಷ್ಟಿಹೀನರಾದವರ ಕಷ್ಟ ಏನು ಅಂತ ನನ್ನಪ್ಪನನ್ನು ನೋಡಿ ಅರ್ಥವಾಯಿತು. ಜೀವನ ಪೂರ್ತಿ ಅಂಧರಾದವರನ್ನು ನೆನೆದು ಬೇಸರವಾಯಿತು. ಅಂಥವರ ನೆರವಿಗೆ ನಿಲ್ಲಬೇಕೆಂದು ತೀರ್ಮಾನಿಸಿ, 'ಎಂಎಸ್‌ವಿ ಐ ಡೋನರ್ಸ್ ಅಸೋಸಿಯೇಷನ್' ಅಡಿ 'ವ್ಯಾಲ್ಯುವೇಷನ್ ಸೆಂಟರ್, ಟ್ರೈನು, ಬಸ್ಸು, ಸಭೆ–ಸಮಾರಂಭ'ಗಳಲ್ಲಿ ಜಾಗೃತಿ ಮೂಡಿಸುತ್ತಿದ್ದೇನೆ. ನನ್ನ ಪರ್ಸ್ ಅಥವಾ ಬ್ಯಾಗ್‌ನಲ್ಲಿ 'ಕಣ್ಣು ದಾನಿಗಳ ಪತ್ರ' ಇಲ್ಲವೆಂದರೆ ನನ್ನ ಪಕ್ಕದಲ್ಲಿ ನನ್ನ ಮಗು ಇಲ್ಲ ಅನ್ನುವ ಭಾವನೆ ವ್ಯಕ್ತವಾಗುತ್ತದೆ. ಸ್ನೇಹಿತರು, ನನ್ನ ವಿದ್ಯಾರ್ಥಿಗಳೂ ಸ್ವಯಂಪ್ರೇರಿತವಾಗಿ ನನ್ನ ಜೊತೆಗೂಡಿದ್ದಾರೆ.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಶ್ರೀನಿವಾಸ್ ಅವರು ಈಚೆಗೆ ನಿಧನರಾದರು. ಆ ಬಗ್ಗೆ ಮೆಸೇಜ್ ಬಂತು. ಕೂಡಲೇ ಮೃತರ ಸಂಬಂಧಿಕರಿಗೆ ಕರೆ ಮಾಡಿ, 'ಶ್ರೀನಿವಾಸ್ ಅವರು ಇನ್ನೂ ಸಾಕಷ್ಟು ಸೇವೆ ಮಾಡಬೇಕು ಅಂದುಕೊಂಡಿದ್ದವರು. ಅವರ ಕಣ್ಣುಗಳು ಇನ್ನೂ ಈ ಪ್ರಪಂಚದಲ್ಲಿ ಜೀವಂತವಾಗಿರಬೇಕು. ಹೀಗಾಗಿ ಅವರ ಕಣ್ಣುಗಳನ್ನು ದಾನ ಮಾಡಿ' ಎಂದು ಕೇಳಿಕೊಂಡೆ. ಶ್ರೀನಿವಾಸ್ ಅವರ ಪತ್ನಿ ಮರುಮಾತಾಡದೆ, 'ಬೇಗ ಬಂದು ತೆಗೆದುಕೊಂಡು ಹೋಗಿ' ಎಂದರು. ನಾರಾಯಣ ನೇತ್ರಾಲಯದವರು ಅವರ ಕಣ್ಣುಗಳನ್ನು ಸಂಗ್ರಹ ಮಾಡಿದರು. ಅವರ ಕಣ್ಣುಗಳನ್ನು 18 ವರ್ಷದ ಒಬ್ಬರಿಗೆ, 31 ವರ್ಷದ ಮತ್ತೊಬ್ಬ ವ್ಯಕ್ತಿಗೆ ಕಳೆದ ವಾರ ಕಸಿ ಮಾಡಲಾಗಿದೆ.

ಸಾಕಷ್ಟು ಮಂದಿಗೆ ನೇತ್ರದಾನ ಮಾಡುವ ಮನಸ್ಸಿದ್ದರೂ ಹೇಗೆ ಮಾಡಬೇಕೆಂಬುದು ಗೊತ್ತಿಲ್ಲ. ಕಣ್ಣುಗಳನ್ನು ಪಡೆಯಲು ಬೇಕಾದ ಅಗತ್ಯ ಸೌಲಭ್ಯವೂ ಎಲ್ಲ ಕಡೆ ಇಲ್ಲ. ಕಣ್ಣಿನ ಆಸ್ಪತ್ರೆಗಳು ಹಾಗೂ ನೇತ್ರದಾನ ಕೇಂದ್ರಗಳು ಪರಸ್ಪರ ಕೊಟ್ಟುಕೊಡುವಿಕೆ ರೀತಿ ಕಾರ್ಯ ನಿರ್ವಹಿಸಬೇಕು. ನೇತ್ರದಾನ ಕಸಿಗೆ ಹೆಸರು ನೋಂದಾಯಿಸಿಕೊಂಡವರ ಪಟ್ಟಿಯನ್ನು ವಿನಿಮಯ ಮಾಡಿಕೊಂಡು, ಯಾರಿಗೆ ಅಗತ್ಯವಿದೆಯೋ ಅವರಿಗೆ ಆದ್ಯತೆಯ ಮೇರೆಗೆ ದಾನವಾಗಿ ಪಡೆದ ಕಣ್ಣುಗಳನ್ನು ನೀಡಬೇಕು. ಪ್ಲೇಗ್, ಪಲ್ಸ್ ಪೋಲಿಯೊ ನಿರ್ಮೂಲನೆ ರೀತಿಯೇ ಅಂಧತ್ವ ನಿರ್ಮೂಲನೆ ಮಾಡಬೇಕು.

**–ಡಾ. ಶೈಲಜಾ,** ಕೃಷ್ಣ ಡಿಗ್ರಿ ಕಾಲೇಜು ಐಟಿಐ ಲೇಔಟ್

ವಾಸ್ತವವಾಗಿ ಹೆಸರು ನೋಂದಾಯಿಸಿಕೊಳ್ಳುವ ಅಗತ್ಯವಿಲ್ಲ. ಮೃತಪಟ್ಟ ತಕ್ಷಣ ನೇತ್ರದಾನ ಕೇಂದ್ರಗಳಿಗೆ ಕರೆ ಮಾಡಿ ಮಾಹಿತಿ ನೀಡಿದರೆ, ಅಲ್ಲಿನ ಸಿಬ್ಬಂದಿ ಕೂಡಲೇ ಬಂದು ಕಣ್ಣುಗಳನ್ನು ಪಡೆದುಕೊಳ್ಳುತ್ತಾರೆ. ಇದು ಅತ್ಯಂತ ಸುಲಭ ಪ್ರಕ್ರಿಯೆ.

- 'ನೇತ್ರದಾನ ಮಾಡಲು ಇಡೀ ದೇಹವನ್ನೇ ಆಸ್ಪತ್ರೆಗೆ ಸಾಗಿಸಬೇಕು. ಅಲ್ಲಿ ಕಣ್ಣು ಪಡೆಯುವ ಪ್ರಕ್ರಿಯೆ ತುಂಬಾ ನಿಧಾನ. ಅದರಿಂದ ಅಂತ್ಯಸಂಸ್ಕಾರಕ್ಕೆ ತಡವಾಗುತ್ತದೆ. ಆ ಉಸಾಬರಿಯೆಲ್ಲ ಏಕೆ ಬೇಕು' ಎಂದೂ ಕೆಲವರು ಭಾವಿಸಿದ್ದಾರೆ. ವಸ್ತುಸ್ಥಿತಿ ಹಾಗಿಲ್ಲ. ಸ್ಥಳೀಯ ಕೇಂದ್ರಗಳಿಗೆ ಕರೆಮಾಡಿದರೆ ಸಾಕು. ಬಹುತೇಕ ಎಲ್ಲ ನೇತ್ರದಾನ ಕೇಂದ್ರಗಳು ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತವೆ. ಅಲ್ಲಿನ ಸಿಬ್ಬಂದಿ ಮೃತರ ದೇಹವಿರುವ ಸ್ಥಳಕ್ಕೇ ಬಂದು ಕಣ್ಣುಗಳನ್ನು ಸಂಗ್ರಹಿಸುತ್ತಾರೆ. ಕೆಲವು ವೇಳೆ ಸ್ಮಶಾನದಲ್ಲಿ, ಸ್ಮಶಾನಕ್ಕೆ ಸಾಗುವ ಹಾದಿಯಲ್ಲೂ ಕಣ್ಣುಗಳನ್ನು ಕೇವಲ 20 ನಿಮಿಷದಲ್ಲಿ ಸಂಗ್ರಹಿಸಿದ ಉದಾಹರಣೆಗಳೂ ಇವೆ.
- ಕಿಡ್ನಿ ವ್ಯಾಪಾರದಂತೆಯೇ ನೇತ್ರದಾನವೂ ಒಂದು ವ್ಯಾಪಾರ ಎಂದು ಕೆಲವರು ಹೇಳುವುದಿದೆ. ಆದರೆ, ಇಲ್ಲಿ ವ್ಯಾಪಾರದ ಪ್ರಶ್ನೆಯೇ ಇಲ್ಲ. ನೇತ್ರದಾನ ಮಾಡಲು ಹಣ ಕೊಡುವುದಿಲ್ಲ. ಹಾಗೆಯೇ ಸಂಗ್ರಹವಾದ ಕಣ್ಣನ್ನು ಬೇರೆಯವರಿಗೆ ನೀಡಲು ಹಣ ಪಡೆಯುವುದೂ ಇಲ್ಲ. ದಾನವಾಗಿಯೇ ಪಡೆದು ದಾನವಾಗಿಯೇ ಬೇರೆಯವರಿಗೆ ನೀಡಲಿಕ್ಕೆ ಸುಲಭಸಾಧ್ಯವಾದ ಏಕೈಕ ಅಂಗ ಕಣ್ಣು. ಆದರೆ, ಕಣ್ಣಿನ ಕಸಿ